ಅ) ಈ ನೌಕರರು ತಮ್ಮನ್ನು ಖಾಯಂ ಮಾಡಲು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆಯೇ ? ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರದವರು ಇದುವರೆವಿಗೆ ಕೈಗೊಂಡ ಕ್ರಮಗಳೇನು ?

**ಶ್ರೀ ಎ. ಲಕ್ಷ್ಮೀಸಾಗರ್** (ಕಾನೂನು, ಸಂಸದೀಯ ವ್ಯವಹಾರ ಹಾಗೂ ಆಹಾರ ನಾಗರೀಕ ಸರಬರಾಜು ಮಂತ್ರಿಗಳು).—

ಅ) ೮ ಮಂದಿ ಕ್ರಮೇಣ ೧.೩.೭೯, ೪.೩.೭೯ ೧.೮.೭೬, ೧೪.೭.೮೨, ೧೨-೭-೮೨ ೧೭.೭.೮೨ ಮತ್ತು ೧೦.೧೨.೮೪ ರಿಂದ ಈವರೆವಿಗೂ.

ಆ) ಹೌದು. ಸದರಿ ನೌಕರರನ್ನು ಖಾಯಂ ಮಾಡುವ ಪ್ರಶ್ನೆಯು ಉದ್ಭವಿಸುವುದಿಲ್ಲ. ಆದರೆ ನಗರ ಯೋಜನಾ ಪ್ರಾಧಿಕಾರದ ಮಾನವಿಯಂತೆ ಏಳು ಹುದ್ದೆಗಳನ್ನು ಸೃಷ್ಟಿಸುವ ಬಗ್ಗೆ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

## ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

### ಹುಕ್ಕೇರಿ ಕುಡಿಯುವ ನೀರಿನ ಯೋಜನೆ ಬಗ್ಗೆ

೧೪೨೬. **ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.** (ಸಂಕೇಶ್ವರ).—ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹುಕ್ಕೇರಿ ನೀರು ಸರಬರಾಜು ಯೋಜನೆ ಮಂಜೂರಾಗಿ ಎಷ್ಟು ದಿನ ಆಯಿತು ?

ಆ) ಈಗಾಗಲೇ ಈ ಕೆಲಸಕ್ಕಾಗಿ ವೆಚ್ಚವಾಗಿರುವ ಹಣದ ಮೊತ್ತವೆಷ್ಟು ?

ಇ) ಈ ಕೆಲಸವನ್ನು ಪೂರ್ತಿಗೊಳಿಸಲು ಎಷ್ಟು ಕಾಲಾವಧಿ ಬೇಕು ?

ಈ) ಆರ್ಥಿಕ ಮಂಗ್ಗಟ್ಟಿನಲ್ಲಿರುವ ಹುಕ್ಕೇರಿ ಪುರಸಭೆಯು ನೀರಿನ ಯೋಜನೆಯ ಪ್ರತಿಶತ ಹತ್ತರಷ್ಟು ವಂತಿಗೆಯನ್ನು ವಜಾ ಮಾಡಲಿಕ್ಕೆ ಆಗುತ್ತಿರುವ ತೊಂದರೆ ಏನು ?

**ಶ್ರೀ ಎ. ಲಕ್ಷ್ಮೀಸಾಗರ್** (ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ಸುಮಾರು ೧ ವರ್ಷ ೮ ತಿಂಗಳು ಆಯಿತು.

ಆ) ರೂ. ೩೯೩,೦೮೮.೦೦ (ಜನವರಿ ೧೯೮೭ರ ಅಂತ್ಯದವರೆಗೆ)

ಇ) ೧೯೮೮ರ ಜನವರಿ ಅಂತ್ಯದ ವೇಳೆಗೆ ಈ ಯೋಜನೆಯಿಂದ ಪಟ್ಟಣಕ್ಕೆ ನೀರು ಸರಬರಾಜು ಮಾಡಲು ಉದ್ದೇಶಿಸಿದೆ.

ಈ) ಪುರಸಭೆಗಳು ಕೊಳವೆ ನೀರು ಸರಬರಾಜುಯೋಜನೆಗೆ ಕಟ್ಟಬೇಕಾದ ಶೇಕಾಡ ೧೦ರ ವಂತಿಗೆ ಕಟ್ಟುವುದಕ್ಕೆ ದಿನಾಂಕ ೧೦.೯.೮೮ರಿಂದ ವಿನಾಯ್ತಿ ನೀಡಲಾಗಿದೆ. ಆದರೆ ಆ ದಿನಾಂಕದ ಮುಂದೆ ಮಂಜೂರಾದ ಯೋಜನೆಗಳಿಗೆ ಈ ಅನುಕೂಲ ಸಿಗುವುದಿಲ್ಲ, ಹುಕ್ಕೇರಿ ಪಟ್ಟಣದ ನೀರು ಸರಬರಾಜು ಯೋಜನೆಯನ್ನು ೧೪.೭.೮೮ರಂದು ಮಂಜೂರು ಮಾಡಿರುವುದರಿಂದ ಪುರಸಭೆಯು ತನ್ನ ಶೇಕಡ ೧೦ರ ವಂತಿಗೆ ಕಟ್ಟಬೇಕಾಗುತ್ತದೆ,

### ತುಂತುರು ನೀರಾವರಿ ಯೋಜನೆಗಳ ಬಗ್ಗೆ

೬೦೨. **ಶ್ರೀ ಜಿ ನಾರಾಯಣಕುಮಾರ್,** (ಬಿನ್ನಿಪೇಟೆ).—ಮಾನ್ಯ ಗ್ರಾಮಾಭಿವೃದ್ಧಿ ಪಸ್ತಿ ಮತ್ತು ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಂತುರು ನೀರಾವರಿ ಯೋಜನೆಗಳನ್ನು ಆಳವಡಿಸಿಕೊಳ್ಳಲು ರೈತರಿಗೆ ಸರಕಾರದಿಂದ ಸಹಾಯ ಧನವನ್ನೇನಾದರೂ ಸಬ್ಸಿಡಿಯನ್ನು ನೀಡಲಾಗುತ್ತಿದೆಯೇ?

ಆ) ಹಾಗಿದ್ದಲ್ಲಿ ಅದರ ಮೊತ್ತ ಎಷ್ಟು?

ಇ) ಏಳನೇ ಯೋಜನೆಯಲ್ಲಿ ಇದಕ್ಕಾಗಿ ವಿನಿಯೋಗಿಸಲಿಟ್ಟ ಹಣವೆಷ್ಟು?

ಈ) ಉಗ್ರಾಣ ಮಳಿಗೆಯಂ ಹೆಚ್ಚುದರವನ್ನು ನಿಗದಿಪಡಿಸಿದ್ದರಿಂದ ತುಂತುರು ನೀರಾವರಿ ಯೋಜನೆಗೆ ಕೇಂದ್ರ ಸರಕಾರದಿಂದ ಕೊಡುವ ಸಹಾಯ ಧನವನ್ನೂ ನಿಲ್ಲಿಸಿರುವುದಂ ನಿಜವೆ?

ಉ) ಹಾಗಿದ್ದಲ್ಲಿ, ಸರಕಾರದವರು ಈ ಬಗ್ಗೆ ಕೈ ಗೊಳ್ಳುವ ಕ್ರಮ ಏನು?

ಶ್ರೀ ಆಬ್ದುಲ್ ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮತ್ತು ವಕ್ಫ್ ಮಂತ್ರಿಗಳು).—

ಅ) ಹೌದಂ. ನೀಡಲಾಗುತ್ತಿದೆ.

ಸಹಾಯ ಧನ ಈ ಕೆಳಕಂಡಂತೆ ಇದೆ.

| | |
|---|---|
| ಸಣ್ಣ ರೈತರಿಗೆ | ಶೇಕಡಾ ೨೫ರಂತೆ |
| ಅತಿ ಸಣ್ಣ ರೈತರಿಗೆ | ಶೇಕಡಾ ೩೩ ೩/೧ ರಂತೆ |
| ಪರಿಶಿಷ್ಟ ಜಾತಿ ಮತ್ತು ವರ್ಗದ ಸಣ್ಣ ಮತ್ತು ಅತೀಸಣ್ಣ ರೈತರು | ಶೇಕಡಾ ೫೦ ರಂತೆ |
| ಸಹಕಾರಿ ಸಮುದಾಯ ತಂತುರು ನೀರಾವರಿ | ಶೇಕಡಾ ೫೦ (ಪ್ರತಿ ವೈಯಂಕ್ತಿಕ ಉಪಕರಣದ ಮೊತ್ತಕ್ಕೆ ಮಿತಿಯಂತೆ) |

ಇ) ಸನ್ ೧೯೮೬–೮೭ನೇ ವರ್ಷಕ್ಕೆ ೩೮.೯೦ ಲಕ್ಷ ರೂಗಳು ಮಂಜೂರಾತಿ ಬಂದಿದೆ. ಇನ್ನೂ ೮೦–೦೦ಲಕ್ಷ ರೂ. ಗಳ ಮಂಜೂರಾತಿ ಬರುವ ನಿರೀಕ್ಷೆ ಇದೆ. ಮುಂದಿನ ವರ್ಷಗಳ ಮೊತ್ತ ಗೊತ್ತಾಗಿಲ್ಲ.

ಈ) ಸರಕು ಖರೀದಿ ಇಲಾಖೆ ಕಡಿಮೆ ದರದಲ್ಲಿ ದರ ಕರಾರನ್ನು ಕೊಟ್ಟಿತ್ತು. ಮತ್ತು ಭಾರತ ಸರಕಾರ ಸಹಾಯ ಧನವನ್ನು ನಿಲ್ಲಿಸಿರುವುದಿಲ್ಲ.

ಉ) ಉದ್ಭವಿಸುವುದಿಲ್ಲ.

## ಸುಳ್ಯ ತಾಲ್ಲೂಕಿನಲ್ಲಿ ಎನ್ ಆರ್ ಇ ಪಿ ಯೋಜನೆ ಬಗ್ಗೆ

ಶ್ರೀ ಕೆ ಕುಶಾಲ (ಸುಳ್ಯ).—ಮಾನ್ಯ ಗ್ರಾಮೀಣಾಭಿವೃದ್ಧಿ ವಸತಿ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೫–೮೬ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನ ಅಮರ ಮಡ್ನೂರು ಗ್ರಾಮದಲ್ಲಿ ಗ್ರಾಮೀಣ ಅಭಿವೃದ್ಧಿ ಯೋಜನೆಯಂತೆ ಎನ್ ಆರ್ ಇ ಪಿ ಯೋಜನೆಯಲ್ಲಿ ಹುಲ್ಲುಗಾವಲು ನಂತೆ ಹುಲ್ಲು ಬೆಳೆಸುವ ಯೋಜನೆಯಂನ್ನು ಮಾಡಲಾಗಿತ್ತೇ?

ಆ) ಹಾಗಿದ್ದಲ್ಲಿ, ಈ ಯೋಜನೆಯಂತೆ ಮಂಜೂರಾದ ಹುಲ್ಲುಗಾವಲಿಗೆ ೧೯೮೫ನ್ನು ಇಸವಿಯವರೆಗೆ ಎಷ್ಟು ಹಣ ಖರ್ಚು ಮಾಡಲಾಗಿದೆ.

ಇ) ಈ ಹುಲ್ಲುಗಾವಲನ್ನು (೨) ಎರಡು ವರ್ಷಗಳಿಂದ ಕೈ ಬಿಡಲಾಗಿತ್ತೆ? ಹಾಗಿದ್ದಲ್ಲಿ ಈಗ ಅದನ್ನು ಪುನಃ ಪ್ರಾರಂಭಿಸಲಾಗಿದೆಯೇ?

ಈ) ಸುಳ್ಯ ತಾಲ್ಲೂಕಿನ ಕನಕಮಂಜಲು ಗ್ರಾಮದಲ್ಲಿ ಕೇಂದ್ರ ಸರ್ಕಾರದ ಯೋಜನೆಯಲ್ಲಿ ಹುಲ್ಲುಗಾವಲು ಪ್ರಸ್ತಾವನೆ ಇತ್ತೆ. ಹಾಗಿದ್ದಲ್ಲಿ ಆ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ. ಹಾಗೂ ಇದರ ಬದಲು ಈ ಹಿಂದೆ ಮಂಜೂರಾಗಿ ಕೈ ಬಿಟ್ಟ ಅಮರ ಮಡ್ನೂರು ಗ್ರಾಮದ ಹುಲ್ಲುಗಾವಲನ್ನು ಕೈಗೆತ್ತಿಕೊಳ್ಳಲಾಗಿದೆಯೇ?